ಸಂತೆಗಳನ್ನೂ ಬಿಡದೆ ವ್ಯಾಪಾರಕ್ಕೆ ಇಟ್ಟಿದ್ದೀವಿ. ಆದರೂ ಇಮಾಜುಗಳನ್ನು ಕೊಳ್ಳುವವರೇ ಇಲ್ಲ. ಮನೆ ಮನೆಗೂ ಹೋಗುತ್ತಿದ್ದೀವಿ. ಜನರಿಗೆ ಇಮಾಜುಗಳೇ ಬೇಡವೇನೋ ಎಂದು ಕಾಣಿಸುತ್ತಿದೆ. ಏನು ಮಾಡುವುದೆಂದೇ ತೋಚುತ್ತಿಲ್ಲ ಸ್ವಾಮಿ.''

''ಬವ್ತೀಸ... ಇಮಾಜುಗಳ ಮಾರಾಟ ಒಂದು ದಂಧೆ ಅಷ್ಟೇ. ದೇವರ ಹೆಸರು ಹೇಳಿಕೊಂಡು ನೀನು ನಡೆಸುವ ದಂಧೆ. ಇಮಾಜುಗಳೇ ದೇವರಲ್ಲ! ಅದೊಂದು ದಂಧೆ ಎಂದು ಈಗ ಎಲ್ಲರಿಗೂ ಗೊತ್ತಾಗಿಬಿಟ್ಟಿದೆ! ಜನರೂ ಬುದ್ಧಿವಂತರಾಗಿದ್ದಾರೆ. ಆದ್ದರಿಂದ, ನಿನ್ನ ಇಮಾಜುಗಳನ್ನು ಕೊಳ್ಳುವವರಿಲ್ಲ. ಇಮಾಜುಗಳನ್ನು ಮಾಡುವುದು ನಿನ್ನ ಕಸುಬು. ನಿನ್ನ ದಂಧೆ. ಅಷ್ಟೇ!...''



''ಹೌದು ಸ್ವಾಮಿ. ನನ್ನ ಹಿರಿಯರು ಮಾಡಿಕೊಂಡು ಬಂದ ವೃತ್ತಿಯನ್ನು ನಾನು ಮುಂದುವರೆಸಿಕೊಂಡು ಬಂದೆ...'' ಬವ್ತೀಸ ಹೇಳಿದ.

''ನಿಜ. ಹೊಟ್ಟೆಪಾಡಿಗೆ ನಾವು ಇಮಾಜುಗಳನ್ನು ಮಾಡುತ್ತಿದ್ದೇವೆ. ಹಾಗೆಯೇ ಪ್ರಾರ್ಥನೆಯನ್ನೂ ಮಾಡುತ್ತೇವೆ. ನಮ್ಮ ಮನೆಯಲ್ಲಿ ಇರುವಷ್ಟು ಇಮಾಜುಗಳು ಬೇರೆಲ್ಲೂ ಇರಲಾರವು ಸ್ವಾಮಿ. ದಿನ ನಿತ್ಯವೂ ನಾವು ಅವುಗಳ ಮುಂದೆ ಅಡ್ಡಬಿದ್ದು ಬೇಡಿಕೊಳ್ಳುತ್ತೇವೆ.''

''ಅದು ನಿನ್ನ ಅಂಧಭಕ್ತಿ ಬವ್ತೀಸ... ಆ ಇಮಾಜುಗಳು ನೀನೇ ಕೈಯಿಂದ ರೂಪಿಸಿದ ಮಣ್ಣಿನ ಮೂರ್ತಿಗಳಷ್ಟೇ. ಅವು ದೇವರುಗಳಲ್ಲ. ಒಮ್ಮೆಯಾದರೂ ನೀನು ಅವುಗಳನ್ನು ಇಗರ್ಜಿಗೆ ತಂದು ಪವಿತ್ರ ಜಲದಿಂದ ಮಂತ್ರಿಸಿಕೊಂಡಿದ್ದೀಯಾ? ಇಲ್ಲ! ಪೂಜ್ಯ ಗುರುಗಳೊಮ್ಮೆ ಅವುಗಳ ಮೇಲೆ ಪವಿತ್ರಜಲವನ್ನು ಪ್ರೋಕ್ಷಿಸಿ ಆಶೀರ್ವದಿಸದಿದ್ದರೆ ನಿನ್ನ ಇಮಾಜುಗಳು ಪಾವನಗೊಳ್ಳುತ್ತಿದ್ದವು. ನಿನಗೆ ಅದು ಗೊತ್ತಿಲ್ಲ. ಪೂಜ್ಯ ಗುರುಗಳಿಂದ ನಿನಗೆ ದೇವರ ಆಶೀರ್ವಾದ ಬೇಕಾಗಿಲ್ಲ. ಆ ಮಣ್ಣಿನ ಮೂರ್ತಿಗಳೇ ದೇವರೆಂದು ಬಗೆದು ಅವುಗಳ ಮುಂದೆ ಅಡ್ಡ ಬೀಳುತ್ತಿದ್ದೀಯ! ಇದರಿಂದ ಏನೂ ಪ್ರಯೋಜನವಾಗದು...'' ಗುರುಗಳು ಹೇಳಿದರು.

''ನನ್ನ ಆತ್ಮಸಾಕ್ಷಿಗನುಗುಣವಾಗಿ ಹೇಳುತ್ತಿದ್ದೇನೆ ಸ್ವಾಮಿ.. ನಾನು ಇಮಾಜುಗಳನ್ನು ಇಗರ್ಜಿಗೆ ತಂದು ನಿಮ್ಮಿಂದ ಮಂತ್ರಿಸಿಕೊಳ್ಳಲಿಲ್ಲ, ನಿಜ. ಆದರೆ, ಆ ಇಮಾಜುಗಳಲ್ಲಿ ದೇವರನ್ನು ಕಂಡು ನಾನು ನನ್ನ ಅಂತರಾಳದಿಂದ ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ನನ್ನ ಮಕ್ಕಳೊಮ್ಮೆ ಓದು ಮುಗಿಸುವವರೆಗೆ ನನ್ನನ್ನು ಕಾಪಾಡು ದೇವರೇ ಎಂದು ಬೇಡಿಕೊಳ್ಳುತ್ತಿರುತ್ತೇನೆ. ಆದರೂ ಯಾವುದೇ